RSI Paper-1 22-10-2017

# RSI(CAR/DAR) – 2017

## Paper – I

ಅಧಿಸೂಚನೆ ಸಂಖ್ಯೆ : 61/ನೇಮಕಾತಿ – 2/2017-18, ದಿನಾಂಕ : 24-08-2017

Maximum Marks : 50
ಗರಿಷ್ಠ ಅಂಕಗಳು : 50

Time : 90 Minutes
ಸಮಯ: 90 ನಿಮಿಷಗಳು

**1. Write an essay on any one of the following topic in not more than 600 words.** **20**

**ಈ ಕೆಳಕಂಡ ಯಾವುದಾದರೂ ಒಂದು ವಿಷಯದ ಕುರಿತಂತೆ 600 ಪದ ಮೀರದಂತೆ ಪ್ರಬಂಧ ಬರೆಯಿರಿ.**

A) Natural disaster and management.

ಪ್ರಕೃತಿ ವಿಕೋಪ ಮತ್ತು ನಿರ್ವಹಣೋಪಾಯಗಳು.

PDF Prepared by Santosh Gowda
"Karnataka State Police"
Telegram n
Whatsapp Gp 9886590615
Join @ksp_rect_exams

B) Modernisation of Police.

ಪೋಲೀಸ್ ಆಧುನೀಕರಣ.

C) Impact of GST on Indian Economy.

ಭಾರತದ ಆರ್ಥಿಕತೆಯ ಮೇಲೆ ಜಿ.ಎಸ್.ಟಿ.ಯ ಪರಿಣಾಮ.

D) Fundamental Rights v/s Fundamental Duties.

ಮೂಲಭೂತ ಹಕ್ಕುಗಳು v/s ಮೂಲಭೂತ ಕರ್ತವ್ಯಗಳು.

E) River water disputes in Karnataka.

ಕರ್ನಾಟಕದ ನದಿ ನೀರಿನ ವಿವಾದಗಳು.

**2. Translate the following paragraph from Kannada to English.** **10**

**ಈ ಕೆಳಕಂಡ ಖಂಡಿಕೆಯನ್ನು ಕನ್ನಡದಿಂದ ಇಂಗ್ಲೀಷ್ ಭಾಷೆಗೆ ಭಾಷಾಂತರ ಮಾಡಿ.**

**ಸೆಲ್ಫಿ ಹುಚ್ಚಿಗೆ ಆತಂಕಕಾರಿ : ಜಾಗೃತಿ ಮೂಡಿಸಿ**

ಆಧುನಿಕ ತಂತ್ರಜ್ಞಾನ ನಮ್ಮ ಜನ ಜೀವನವನ್ನು ಎಷ್ಟೇ ಸುಲಭವಾಗಿಸಿದ್ದರೂ ಅದರ ಮೇಲೆ ನಿಯಂತ್ರಣ ಇಲ್ಲವಾದಲ್ಲಿ ಅನಾಹುತಕ್ಕೆ ದಾರಿ ಮಾಡಿಕೊಡುತ್ತದೆ ಎನ್ನುವುದು ನಿಸ್ಸಂಶಯ. ಮನುಷ್ಯರಲ್ಲಿ ಹೆಚ್ಚುತ್ತಿರುವ ಸ್ವಮೋಹ ಮತ್ತು ಪ್ರದರ್ಶನ ಪ್ರಿಯತೆ ಪ್ರಾಣಕ್ಕೆ ಕುತ್ತು ತರುವುದು ನಿಜಕ್ಕೂ ಆತಂಕಕಾರಿ ವಿದ್ಯಮಾನ.

ಬಹುತೇಕ ಮೊಬೈಲ್‌ಗಳಲ್ಲಿ ಈಗ ಫೋಟೋ ತೆಗೆಯುವ ಸೌಲಭ್ಯಗಳು ಇವೆ. ಆಧುನಿಕ ಸ್ಮಾರ್ಟ್ ಫೋನ್‌ಗಳು ಕ್ಯಾಮರಾಗಳಿಗಿಂತ ಹೆಚ್ಚು ಗುಣಮಟ್ಟದ ಫೋಟೋಗಳನ್ನು ಕ್ಲಿಕ್ಕಿಸುತ್ತವೆ. ಮೊಬೈಲ್‌ಗಳಲ್ಲಿ ಸ್ವಂತ ಫೋಟೋಗಳನ್ನು ಕ್ಲಿಕ್ಕಿಸಿಕೊಳ್ಳುವುದನ್ನು ಸೆಲ್ಫಿ ತೆಗೆದುಕೊಳ್ಳುವುದು ಎಂದು ಕರೆಯುವುದು ವಾಡಿಕೆ. ಸೆಲ್ಫಿ ಕ್ಲಿಕ್ಕಿಸಿಕೊಂಡು ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಗೆಳೆಯ ಗೆಳತಿಯರ ಜೊತೆಗೆ ಹಂಚಿಕೊಳ್ಳುವುದು ಇತ್ತೀಚಿಗೆ ಬಹುದೊಡ್ಡ ರೂಪದಲ್ಲಿ ಬೆಳೆಯುತ್ತಿದೆ. ಸೆಲ್ಫಿ ಹುಚ್ಚು ಯಾವ ಪರಾಕಾಷ್ಠೆಯನ್ನು ತಲುಪಿದೆಯೆಂದರೆ ನಾವು ನಮ್ಮ ಸಾಮಾಜಿಕ ಬದುಕಿನ ನೀತಿ ನಿಯಮಗಳನ್ನು ಕೂಡ ಇದಕ್ಕಾಗಿ ಮರೆಯುತ್ತಿದ್ದೇವೆ. ಸ್ಮಾರ್ಟ್ ಫೋನ್‌ಗಳನ್ನು ಎಲ್ಲಿ ಹಾಗೂ ಎಷ್ಟು ಪ್ರಮಾಣದಲ್ಲಿ ಬಳಸಬೇಕು, ಹೇಗೆ ಬಳಸಬೇಕು ಎನ್ನುವ ಔಚಿತ್ಯ ಪ್ರಜ್ಞೆಯು ನಮ್ಮ ಯುವ ಜನಾಂಗದಲ್ಲಿ ಇತ್ತೀಚಿಗೆ ಇಲ್ಲವಾಗುತ್ತಿದೆ. ಮೊಬೈಲ್‌ಗಳ ಅತಿಯಾದ ಬಳಕೆ ನಮ್ಮ ಎಳೆಯ ಮಕ್ಕಳಲ್ಲೂ ದೈಹಿಕ ಮತ್ತು ಮಾನಸಿಕ ನ್ಯೂನ್ಯತೆಗಳಿಗೆ ಕಾರಣವಾಗುತ್ತಿದೆ. ಮೊಬೈಲ್ ಅತ್ಯುತ್ತಮ ಸಂಪರ್ಕ ಸಾಧನ ಎನ್ನುವುದರಲ್ಲಿ ಎರಡು ಮಾತಿಲ್ಲ, ಅದಕ್ಕೆ ಹೊಸದಾಗಿ ಸೇರ್ಪಡೆಯಾಗುತ್ತಿರುವ ತಂತ್ರಜ್ಞಾನ, ಅದು ಪಡೆಯುತ್ತಿರುವ ಸಾಮಾಜಿಕ ಆಯಾಮ ಎಲ್ಲವೂ ನಮ್ಮ ಬದುಕಿನ

P.

www.kpscvaani.com

Scanned by CamScanner

ಗುಣಮಟ್ಟ ಹೆಚ್ಚಿಸಿದೆ ಎನ್ನುವುದು ನಿಜ. ಆದರೆ ತಂತ್ರಜ್ಞಾನವೇ ದೊಡ್ಡ ಗೀಳಾಗಿ ಬೆಳೆದು ಯುವ ಜನರು ಜೀವ ಕಳೆದುಕೊಳ್ಳುವ ಮಟ್ಟಕ್ಕೇರಿದ್ದು ಮನುಷ್ಯ ಚೇತನಕ್ಕೆ ವಿರುದ್ಧವಾದ ಸಂಗತಿ. ತಂತ್ರಜ್ಞಾನ ಮನುಷ್ಯನ ವ್ಯಕ್ತಿತ್ವವನ್ನು ಕುಬ್ಜವಾಗಿಸುತ್ತಿರುವುದು ಅನಾರೋಗ್ಯಕರ ಸಮಾಜದ ಲಕ್ಷಣ. ಶಾಲೆ, ಕಾಲೇಜುಗಳಲ್ಲಿ ಮೊಬೈಲ್ ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸುವುದು ಪ್ರಾಯೋಗಿಕವಾಗಿ ಸಾಧ್ಯವಾಗಿದೆ. ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಮೊಬೈಲ್‌ಗಳನ್ನು ನಿಷೇಧಿಸುವುದು ಕಷ್ಟಸಾಧ್ಯ. ಹೀಗಿದ್ದೂ ಮುಂಬೈನಲ್ಲಿ ಇತ್ತೀಚೆಗೆ 16 ಸ್ಥಳಗಳಲ್ಲಿ ಸೆಲ್ಫಿ ನಿಷೇಧ ಹೇರಲಾಗಿದೆ. ಮನೆ ಮನೆಗಳಲ್ಲಿ ಈ ಬಗ್ಗೆ ಜಾಗೃತಿ ಮೂಡುವುದು ಅಗತ್ಯ. ಮಕ್ಕಳು ಮೊಬೈಲ್ ಗೀಳಿಗೆ ಬಲಿಯಾಗದಂತೆ ಬಾಲ್ಯದಿಂದಲೇ ಕಟ್ಟುನಿಟ್ಟಾಗಿ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಪೋಷಕರದ್ದು. ಈ ನಿಟ್ಟಿನಲ್ಲಿ ಸಾಮಾಜಿಕ ಎಚ್ಚರವನ್ನು ಮೂಡಿಸುವ ಕೆಲಸ ತುರ್ತಾಗಿ ಆಗಬೇಕಿದೆ. ಈ ಗೀಳಿನಿಂದ ನಮ್ಮ ಯುವ ಜನ ಮತ್ತು ಮಕ್ಕಳನ್ನು ಹೊರತರಲು ದೊಡ್ಡಮಟ್ಟದ ಜನ ಜಾಗೃತಿಯ ಅಗತ್ಯವಿದೆ. ಈ ಜನಜಾಗೃತಿ ಸಾಮಾಜಿಕ ಆಂದೋಲನದ ರೀತಿಯಲ್ಲಿ ಬೆಳೆಯಬೇಕಿದೆ.

3. **Translate the following from English to Kannada.**

**ಈ ಕೆಳಕಂಡ ಖಂಡಿಕೆಯನ್ನು ಕನ್ನಡದಲ್ಲಿ ಭಾಷಾಂತರ ಮಾಡಿರಿ.**

For more than two decades, building a multipolar world has been one of the central themes of India's foreign policy. For nearly a decade, the BRICS, the forum that brings together Brazil, Russia, India, China and South Africa has been the main forum for the pursuit of that objective. But China's rapid rise has compelled India to rethink the virtues of a multipolar world. As Beijing squeezes India's space in the sub-continent and the Indian ocean and becomes a lot more assertive in the bilateral disputes with Delhi, the construction of a 'Multipolar Asia' - or balancing China-is turning out to be as important as the search for a "Multipolar World", for long the code words for hedging against American unilateralism. That Washington has become more empathetic to India's regional and global concerns - ranging from terrorism in Pakistan to Delhi's membership of the nuclear supplier's group - has made a recalibration of India's great power relations inevitable.

After the cold war, India faced a twin challenge. The collapse of the Soviet Union and the logic of adapting to a globalising world saw Delhi re-engage the US and the West. Even as India reached out to the West after the cold war, it was deeply wary of its interventionist policies on a range of issues-including human rights Kashmir and nuclear non-proliferation. To insure against the negative fall out from the unipolar world. Delhi chose to line up under Moscow's banner for a great "strategic triangle" of eastern powers, involving Russia, China and India, to blunt America's edge in the post-cold war world.

4. **Write a Precis (summary) of the Kannada passage given below by reducing it to 1/3rd of the size and provide suitable title.**

**ಈ ಕೆಳಕಂಡ ಖಂಡಿಕೆಯ ಸಾರಾಂಶವನ್ನು 1/3 ಭಾಗಕ್ಕೆ ಮೀರದಂತೆ ಬರೆಯಿರಿ.**

ನಮ್ಮ ಹಿರಿಯರ ಬಾಲ್ಯದ ಬಗ್ಗೆ ಕೇಳಿದರೇ ಅವರು ಹಳ್ಳಿಯಲ್ಲಿ ದಿನನಿತ್ಯ ಶಾಲೆಗೆ ಹತ್ತಾರು ಕಿ.ಮೀ. ನಡೆದು ಹೋಗುತ್ತಿದ್ದದ್ದನ್ನು ನೆನಪಿಸಿಕೊಳ್ಳುವುದು ಸಹಜ. ಆದರೆ ಈಗ ಕಾಲ ತುಂಬಾ ಬದಲಾಗಿದೆ. ಪ್ರತಿ ಹಳ್ಳಿಯಲ್ಲಿಯೂ ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಅಥವಾ ಕಿರಿಯ ಪ್ರಾಥಮಿಕ ಶಾಲೆ ಇರುವುದು ಸರ್ವೇ ಸಾಮಾನ್ಯ. ಪ್ರೌಢಶಾಲೆ ಕೂಡಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವುದು ಕಂಡು ಬರುತ್ತದೆ. ಆದರೆ ಇಂದಿನ ಸಮಸ್ಯೆ ಮನೆಯ ಹತ್ತಿರ ಶಾಲೆ ಇರೋದಲ್ಲ, ಬದಲಾಗಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಇರುವುದು.

ನಮ್ಮ ದೇಶದಲ್ಲಿ ಸುಮಾರು 15 ಲಕ್ಷ ಶಾಲೆಗಳು ಇವೆ. ಅದರಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ ಸುಮಾರು 11 ಲಕ್ಷ. ಇದರಲ್ಲಿ 4.20 ಲಕ್ಷ ಶಾಲೆಗಳಲ್ಲಿ (33%) 50ಕ್ಕೂ ಕಡಿಮೆ ಮಕ್ಕಳು ನೊಂದಾವಣೆಯಾಗಿದ್ದಾರೆ. ಕೇಂದ್ರ ಸರ್ಕಾರದ District Information System for Education (DISE) - 2015-16ರ ಅಂಕಿಅಂಶಗಳ ಪ್ರಕಾರ. ಸುಮಾರು 1 ಲಕ್ಷ ಸರ್ಕಾರಿ ಶಾಲೆಗಳಲ್ಲಿ 20ಕ್ಕೂ ಕಡಿಮೆ ಮಕ್ಕಳು ಇದ್ದಾರೆ. ಅಂದರೆ ಒಂದು ತರಗತಿಯಲ್ಲಿ 5 ಅಥವಾ ಅದಕ್ಕಿಂತ ಕಡಿಮೆ ಮಕ್ಕಳು ಇದ್ದಹಾಗೆ.

www.kpscvaani.com

Scanned by CamScanner

ಕರ್ನಾಟಕದಲ್ಲಿ 49,430 ಸರ್ಕಾರಿ ಶಾಲೆಗಳ ಪೈಕಿ ಇಂತಹ ಸಣ್ಣ ಮತ್ತು ಅತಿ ಸಣ್ಣ (ಮಕ್ಕಳ ನೋಂದಣಿ ಪ್ರಕಾರ) ಶಾಲೆಗಳ ಸಂಖ್ಯೆ 10,420 (2015-16ರಲ್ಲಿ) ಇದಷ್ಟೇ ಅಲ್ಲ, ಪ್ರತಿ ವರ್ಷಕ್ಕೂ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಲೇ ಇದೆ. ಈಗಾಗಲೇ ಸುಮಾರು 5000 ಶಾಲೆಗಳಲ್ಲಿ ಮಕ್ಕಳೇ ಇಲ್ಲ. ಇದರಿಂದ ಸರ್ಕಾರಿ ಶಾಲೆಗಳ ಉಳಿವಿನ ಬಗ್ಗೆ ದೊಡ್ಡ ಪ್ರಶ್ನೆ ಎದ್ದಿದೆ.

ನಮ್ಮಲ್ಲಿ ಇಷ್ಟೊಂದು ಸಣ್ಣ ಶಾಲೆಗಳು ಹೇಗೆ ಬಂದವು ಎಂಬುದಕ್ಕೆ ಪ್ರಮುಖವಾಗಿ ಮೂರು ಕಾರಣಗಳಿವೆ:

1. **ಶಾಲಾವಕಾಶ ನೀತಿ (Policy of access to Schools)** : ದೇಶದ ಎಲ್ಲಾ ಮಕ್ಕಳಿಗೂ ಕಡ್ಡಾಯ ಶಿಕ್ಷಣ ಒದಗಿಸಬೇಕು ಮತ್ತು ಎಲ್ಲರಿಗೂ ಶಾಲಾವಕಾಶ ಇರಬೇಕು ಎಂಬ ಪ್ರಯತ್ನ ಸ್ವತಂತ್ರಪೂರ್ವದಿಂದ ನಡೆದಿದೆ. ಕಳೆದ 70 ವರ್ಷಗಳಲ್ಲಿ ಅನೇಕ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳು ಪ್ರಾರಂಭವಾದವು. ಇವೆಲ್ಲದರ ಫಲವಾಗಿ, ಈಗ ಶೇಕಡಾ 98ರಷ್ಟು ಹಳ್ಳಿ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಒಂದು ಕಿಲೋಮೀಟರ್ ಮಿತಿಯಲ್ಲಿ ಕನಿಷ್ಟ ಒಂದು ಶಾಲೆ ಇದೆ ಹಾಗೂ 3 ಕಿ.ಮೀ. ಮಿತಿಯಲ್ಲಿ ಒಂದು ಹಿರಿಯ ಪ್ರಾಥಮಿಕ ಶಾಲೆ ಕಂಡು ಬರುತ್ತದೆ. ಹೀಗೆ ಎಲ್ಲರಿಗೂ ಶಾಲಾವಕಾಶ ದೊರೆತಿರುವುದು ಸಂತಸದ ಸುದ್ದಿಯೇ ಆದರೂ ಮಕ್ಕಳ ಸಂಖ್ಯೆಗೆ ತಕ್ಕಂತೆ ಶಾಲೆ ನಿರ್ಮಿಸದಿದ್ದರಿಂದ, ಶಾಲೆಗಳ ಅತಿವೃಷ್ಟಿಯಿಂದ ಮಕ್ಕಳೇ ಇಲ್ಲದ ಪರಿಸ್ಥಿತಿ ಆಗಿದೆ. ಒಳ್ಳೆಯ ಉದ್ದೇಶದಿಂದ ಪ್ರಾರಂಭಿಸಿದ ನೀತಿಗಳು ಈಗ ಬದಲಾಯಿಸುವ ಅಗತ್ಯ ಇದೆ.

2. **ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದು (Demography decline of population)** : ಭಾರತದಲ್ಲಿ ಈಗ ಮಕ್ಕಳ ಜನ್ಮ ದರ (Total Fertility Rate - TFR) ಕಡಿಮೆ ಆಗುತ್ತಿದೆ. ಈಗಾಗಲೇ ಸಂಪೂರ್ಣ ಜನ್ಮ ದರ (Fertility Rate) ಜನಸಂಖ್ಯಾ ಸ್ಥಿರತೆಗೆ ಬೇಕಾದ 2.1ಕ್ಕಿಂತ ಕಡಿಮೆ ಆಗಿದೆ ಇದರಿಂದ, ನಮ್ಮ ದೇಶದ 6-14 ವಯಸ್ಸಿನ ಮಕ್ಕಳ ಸಂಖ್ಯೆ 20.7 ಕೋಟಿ (2011), 2013ರಲ್ಲಿ 17.5 ಕೋಟಿಗೆ ಇಳಿದಿದೆ. ಹೀಗಾಗಿ ಮುಂದೆ ನಮ್ಮ ಶಾಲೆಗಳಲ್ಲಿ ಹೆಚ್ಚು ಮಕ್ಕಳಿರುವುದಿಲ್ಲ.

3. **ಖಾಸಗಿ ಶಾಲೆಗಳ ವಿಸ್ತರಣೆ** : ಕಳೆದ 10 - 15 ವರ್ಷಗಳಿಂದ ನಮ್ಮ ದೇಶದಲ್ಲಿ ಖಾಸಗಿ ಶಾಲೆಗಳ ಸಂಖ್ಯೆ ವಿಪರೀತ ಏರಿದೆ. ಇದರಲ್ಲೂ ಅನೇಕ ಕಡಿಮೆ ವೆಚ್ಚದ ಶಾಲೆಗಳು ಕೂಡ ನಿರ್ಮಾಣವಾಗಿವೆ. ಹೀಗಾಗಿ ಈಗ ಖಾಸಗಿ ಶಾಲೆಗಳು ಸಮಾಜದ ಎಲ್ಲಾ ವರ್ಗಗಳಿಗೂ ಎಟಕುವಂತಿವೆ. ಈಗ ಅತೀ ಬಡ ಕುಟುಂಬದವರು ಮಾತ್ರ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಶೇ. 54ರಷ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 25ಕ್ಕೂ ಕಡಿಮೆ. ಇದರಲ್ಲಿ ಬಹುತೇಕ ಶಾಲೆಗಳಲ್ಲಿ ಬಹುಮುಖಿ (multi grade classrooms) ತರಗತಿಗಳು ನಡೆಯುತ್ತಿವೆ. ಶೇಕಡ 50ಕ್ಕೂ ಹೆಚ್ಚು ಪ್ರಾಥಮಿಕ ಶಾಲೆಗಳಲ್ಲಿ ಇಬ್ಬರು ಅಥವಾ ಒಬ್ಬರು ಶಿಕ್ಷಕರು ನೇಮಕವಾಗಿರುತ್ತಾರೆ. ಹಿರಿಯ ಪ್ರಾಥಮಿಕ ಶಾಲೆಗಳ ಸ್ಥಿತಿ ಹೆಚ್ಚು ಕಮ್ಮಿ ಹೀಗೇ ಇದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಸುಮಾರು ವರ್ಷದಿಂದ ನಲಿ- ಕಲಿ ಶಾಲೆಗಳು (1-3 ತರಗತಿ ಸೇರಿ ಕಲಿಕೆ) ಜಾರಿಯಲ್ಲಿವೆ.

ಈ ಸಣ್ಣ ಶಾಲೆಗಳ ವಿತರಣೆ (distribution), ರಾಜ್ಯದಲ್ಲಿ ವಿವಿಧ ರೀತಿಯಲ್ಲಿದೆ. ದಕ್ಷಿಣ ಜಿಲ್ಲೆಗಳಲ್ಲಿ ಈ ಸಮಸ್ಯೆ ಹೆಚ್ಚು, ಮೈಸೂರು ಆಡಳಿತ ಪ್ರಾಂತ್ಯದಲ್ಲಿ 29% ಹಿರಿಯ ಪ್ರಾಥಮಿಕ ಶಾಲೆಗಳು ಸಣ್ಣ ಶಾಲೆಗಳು, ಆದರೆ ಕಲಬುರ್ಗಿ ಪ್ರಾಂತ್ಯದಲ್ಲಿ ಇದರ ಸಂಖ್ಯೆ ಬರೀ 4.6% ಕಲಬುರ್ಗಿ, ಕೊಪ್ಪಳ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳು ಹಿಂದುಳಿದ ಜಿಲ್ಲೆಗಳು. ಇಲ್ಲಿ ಖಾಸಗಿ ಶಾಲೆಗಳ ಹಾವಳಿ ಕಡಿಮೆ. ಹಾಗಾಗಿ ಸರ್ಕಾರಿ ಶಾಲೆಗಳಲ್ಲಿ ಹೆಚ್ಚು ಮಕ್ಕಳು ಇದ್ದಾರೆ.

ಅಂಕಿಅಂಶಗಳ ಜೊತೆ ನಿಜ ಜೀವನದಲ್ಲಿ ಇಂತಹ ಸಣ್ಣ ಮತ್ತು ಕಿರಿಯ ಸರ್ಕಾರಿ ಶಾಲೆಗಳು ಹೇಗೆ ನಡೆಯುತ್ತಿವೆ ಎಂದು ತಿಳಿಯಲು ನಾವು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಮತ್ತು ಚಾಮರಾಜನಗರದ ಅನೇಕ ಶಾಲೆಗಳಿಗೆ ಭೇಟಿ ನೀಡಿದೆವು. ಇದರಿಂದ ಕೆಲವೊಂದು ಆಶ್ಚರ್ಯ ಸಂಗತಿಗಳು ಹೊರಬಂದವು. ಶಾಲೆಗಳಲ್ಲಿ DISEನಲ್ಲಿ ಕೊಡುವ ಅಂಕಿಗಳಿಗಿಂತ ಕಡಿಮೆ ಮಕ್ಕಳು ಇರುತ್ತಾರೆ. ದೈನಂದಿನ ಮಕ್ಕಳ ಹಾಜರಾತಿ ಇನ್ನು ಕಡಿಮೆ ಇಂತಹ ಅನೇಕ ಶಾಲೆಗಳಲ್ಲಿ ಒಬ್ಬರು ಅಥವಾ ಇಬ್ಬರು ಶಿಕ್ಷಕ, ಶಿಕ್ಷಕಿಯರು ಇದ್ದರೇ ಹೆಚ್ಚು, ಅದರಲ್ಲೂ ಒಬ್ಬ ಶಿಕ್ಷಕ ರಜೆ ಹಾಕಿದರೇ (ಅನಧಿಕೃತ, ಅನಧಿಕೃತ ರಜಾ, ಪಠ್ಯೇತರ ವಿಷಯಕ್ಕೆ ಗೈರು ಹಾಜರಿ) ಬೇರೆ ತರಗತಿಗಳನ್ನು ಇರುವ ಶಿಕ್ಷಕರು ನಿಭಾಯಿಸಬೇಕು ಇದರಿಂದ ಒಮ್ಮೊಮ್ಮೆ ಒಬ್ಬ ಶಿಕ್ಷಕರು 4-5 ತರಗತಿಗಳನ್ನು, 20-30 ಪಠ್ಯ ವಿಷಯಗಳನ್ನು ನಿಭಾಯಿಸಬೇಕಾಗುತ್ತದೆ. ಇಂತಹ ಶಾಲೆಗಳಲ್ಲಿ ಮಕ್ಕಳು ಹೇಗೆ ಕಲಿಯುತ್ತಾರೆ ನೀವೇ ಯೋಚಿಸಿ ? ಇಂತಹ ಸ್ಥಿತಿ ನೋಡಿ ಬಡ ಕುಟುಂಬದವರು ತಮ್ಮ ಮಕ್ಕಳನು ಸರ್ಕಾರಿ ಶಾಲೆಗೆ ಸೇರಿಸುವುದಕ್ಕೆ ಹಿಂಜರಿಯುತ್ತಾರೆ. ಹೀಗಾಗಿ ಎಷ್ಟೋ ಶಾಲೆಗಳಲ್ಲಿ ಎಷ್ಟು ಕಡಿಮೆ ಮಕ್ಕಳ ದಾಖಲಾತಿ ಇರುತ್ತೆ ಅಂದ್ರೆ ಅವುಗಳನ್ನು ಮುಚ್ಚುವ ಸ್ಥಿತಿಯಲ್ಲಿವೆ.

ಇಂತಹ ಸಣ್ಣ ಹಾಗೂ ಕಿರಿ ಶಾಲೆಗಳ ಭವಿಷ್ಯ ಏನು ? ಮಕ್ಕಳೇ ಇಲ್ಲದ ಶಾಲೆಗಳು ಇದ್ದು ಏನು ಉಪಯೋಗ ? ನಮ್ಮಲ್ಲಿ ಇಷ್ಟೊಂದು ಶಾಲೆಗಳ ಅಗತ್ಯ ಇದೆಯೇ ? ಗುಣಮಟ್ಟ ನೋಡಿಕೊಳ್ಳಲಾಗದಂತಹ ಶಾಲೆಗಳನ್ನು ಹೆಚ್ಚಿಸಿ ಏನೂ ಉಪಯೋಗ ? 10 ನಿಷ್ಕ್ರೀಯ ಶಾಲೆಗಳನ್ನು ನಡೆಸುವ ಬದಲು ಒಂದು ಒಳ್ಳೆಯ ಶಾಲೆ ಇರುವುದು ಉತ್ತಮವಲ್ಲವೇ ?

www.kpscvaani.com

Scanned by CamScanner

ಹಲವು ನೆರೆಹೊರೆ ಶಾಲೆಗಳನ್ನು ಒಟ್ಟುಗೂಡಿಸಿ ಒಂದು ಮಾದರಿ ಸರ್ಕಾರಿ ಶಾಲೆಯನ್ನು ಹೇಗೆ ಮಾಡಬಹುದು ಎಂದು ಅಧ್ಯಯನ ಮಾಡಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ಕಪಕ್ಕದ 5-10 ಶಾಲೆಗಳನ್ನು ಒಂದುಗೂಡಿಸಿದರೆ, ಪ್ರತಿ ದರ್ಜೆಯಲ್ಲೂ ಹೆಚ್ಚು ಮಕ್ಕಳು ಕಂಡು ಬರುತ್ತಾರೆ. ಎಲ್ಲಾ ಶಿಕ್ಷಕರನ್ನು ಒಟ್ಟುಗೂಡಿಸುವುದರಿಂದ, ಪ್ರತಿ ತರಗತಿಗೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ಶಿಕ್ಷಕರನ್ನು ಹಾಗೂ ವಿಷಯ ಸಂಬಂಧಿತ ಶಿಕ್ಷಕರನ್ನು ನೇಮಿಸುವ ಸಾಧ್ಯತೆ ಇದೆ. ಮಧ್ಯಾಹ್ನ ಭೋಜನ ನಡೆಸುವ ಕಾರ್ಯ ಹಾಗೂ ಗುಣಮಟ್ಟ ಮೇಲ್ವಿಚಾರಣೆ ಸುಲಭವಾಗುತ್ತದೆ. ಪ್ರಾಥಮಿಕ , ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಒಂದೇ ಜಾಗದಲ್ಲಿ ನಡೆಸುವ ಸಾಧ್ಯತೆ ಹೆಚ್ಚಿ, ಮಕ್ಕಳು 1-10ರ ತನಕ ಶಾಲೆ ಮುಗಿಸಬಹುದು. ಇವೆಲ್ಲದರಿಂದ ಶಾಲೆ ನಡೆಸುವ ವೆಚ್ಚ ಕಡಿಮೆಯಾಗಿ ಸರ್ಕಾರಕ್ಕೂ ಬಹಳ ಉಳಿತಾಯ ಆಗುತ್ತದೆ ಹಾಗೂ ದಕ್ಷ ಶಾಲಾ ಆಡಳಿತಕ್ಕೆ ಅವಕಾಶ ಕೊಡುತ್ತದೆ. ಇಂತಹ ಶಾಲಾ ಏಕೀಕರಣ ಗ್ರಾಮ ಪಂಚಾಯಿತಿಯಲ್ಲೂ ಮಾಡಬಹುದು. ಪಟ್ಟಣ ಪ್ರದೇಶದಲ್ಲಿ ಶಾಲೆಗಳು ಇನ್ನೂ ಸಮೀಪ ಇರುತ್ತವೆ. ಇದರಿಂದ ಶಾಲಾ ಏಕೀಕರಣ ಇನ್ನೂ ಸುಲಭ. ಬೆಂಗಳೂರಿನಲ್ಲಿ ಸರ್ಕಾರಿ ಶಾಲೆಗಳ ಒಂದು ಗುಂಪು, ಕಾರ್ಪೋರೇಷನ್ (ಬಿಬಿಎಂಪಿ) ಶಾಲೆಗಳ ಇನ್ನೊಂದು ಗುಂಪಾಗಿ ಮಾಡಿ ಕೆಲವು ಮಾದರಿ ಏಕೀಕೃತ ಶಾಲೆಗಳನ್ನು ಮಾಡಬಹುದು.

ಈ ರೀತಿಯ ಶಾಲಾ ಏಕೀಕರಣವನ್ನು (School Consolidation) ಕೆಲವು ರಾಜ್ಯಗಳು (ರಾಜಸ್ಥಾನ , ತೆಲಂಗಾಣ, ಆಂಧ್ರಪ್ರದೇಶ, ಒಡಿಸ್ಸಾ) ಈಗಾಗಲೇ ಪ್ರಾರಂಭಿಸಿವೆ. ರಾಜಸ್ಥಾನದಲ್ಲಿ ಈಗಾಗಲೇ 17,000 ಸರ್ಕಾರಿ ಶಾಲೆಗಳ ಕೇಂದ್ರೀಕರಣ ಮಾಡಿ ಅನೇಕ 'ಆದರ್ಶ ವಿದ್ಯಾಲಯ'ಗಳನ್ನು (ಮಾಡೆಲ್ ಸ್ಕೂಲ್) ತೆರೆದಿದ್ದಾರೆ. ನಮ್ಮ ರಾಜ್ಯದಲ್ಲಿ ಹೀಗೆ ಮಾದರಿ ಸರ್ಕಾರಿ ಶಾಲೆಗಳನ್ನು ಮಾಡಿ, ನಮ್ಮ ಮಕ್ಕಳ ಭವಿಷ್ಯ ಉಜ್ವಲ ಮಾಡೋಣ, ನಮ್ಮ ಸರ್ಕಾರ ಈ ನಿಟ್ಟಿನಲ್ಲಿ ಕೆಲಸ ಮಾಡಲಿ.

www.kpscvaani.com

Scanned by CamScanner